SRI B. B. SAYANAK.—He has called the meeting of the citizens: I was there, in that meeting. He has promised that he will construct: If he is true to his words, he should construct the temple and take the blessing of the people of that area.

SRI R. GUNDU RAO.—Allright we will instruct them.

MATTER UNDER RULE 312

re: Irregular Supply of Electricity in Balloli Constituency

ಶ್ರೀ ಎಸ್. ಎಸ್. ಆರಕೇರಿ.—ಸನ್ಮಾನ್ಯ ಅಧ್ಯಕ್ಷರೆ, ನಾನು ಈ ರಾಜ್ಯದ ಮುಖ್ಯ ಮಂತ್ರಿಗಳ ಗಮನಕ್ಕೆ ತಮ್ಮ ಮೂಲಕ ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕು, ಬಳ್ಳೊಳ್ಳಿ ಕ್ಷೇತ್ರದಲ್ಲಿನ ಸುಮಾರು ೯೦ ಹಳ್ಳಿಗಳಲ್ಲಿ ವಿದ್ಯುಚ್ಛಕ್ತಿ ಕೊರತೆಯಿಂದಾಗಿ ಬಹಳ ಗಂಭೀರ ಪರಿಸ್ಥಿತಿ ಉಂಟಾಗಿರುವುದರ ಬಗ್ಗೆ ಗಮನ ಸೆಳೆಯುತ್ತೇನೆ. ಈ ವಿಷಯವನ್ನು ಈ ಸದನದಲ್ಲಿ ಕಳೆದ ಎರಡು ವರ್ಷಗಳಿಂದ ತರುತ್ತಲೇ ಇದ್ದೇನೆ; ಚರ್ಚೆಯಾಗುತ್ತಲೇ ಇದೆ ಈ ಹಿಂದೆ ಈ ಬಗ್ಗೆ ಚರ್ಚೆಯಾದ ಕಾರಣ ೧೯೭೮ರಲ್ಲಿ ಸುಮಾರು ಒಂದು ಕೋಟಿ ೧೦ ಲಕ್ಷ ರೂಪಾಯಿ ಒಂದು ಯೋಜನೆಯನ್ನು ಇಂಡಿಯಿಂದ ಜಳಕಿ ಸರ್ಕಲ್ ನಲ್ಲಿ ೫೫ ಕಿ. ವಾ. ಸಾಮರ್ಥ್ಯವುಳ್ಳ ಒಂದು ಸಬ್ ಸ್ಟೇಷನ್‌ನ್ನು ಸ್ಥಾಪನೆ ಮಾಡಬೇಕೆಂದು ಕೆಲಸವನ್ನು ಪ್ರಾರಂಭಿಸಲಾಯಿತು. ಸುಮಾರು ಎರಡು ಎರಡೂವರೆ ವರ್ಷಗಳಾದರೂ ಇದು ಮುಗಿಯುವ ಹಂತದಲ್ಲಿ ಇಲ್ಲ. ಹಿಂದಿನ ಸರ್ಕಾರ ಈ ಕಾರ್ಯಕ್ರಮವನ್ನು ೧೯೭೯ ರೊಳಗೆ ಇದನ್ನು ಮುಗಿಸುತ್ತೆವೆಂದು ಆಶ್ವಾಸನೆಯನ್ನು ಕೊಟ್ಟಿತ್ತು. ಇಲ್ಲಿ ಇನ್ನೂ ಕೆಲಸ ಪೂರೈಸದಿರುವುದರಿಂದ ನಾನಂ ಅನೇಕ ಸಲ ವಿದ್ಯುತ್‌ಚ್ಛಕ್ತಿ ಬೋರ್ಡ್ ಇಂದಿನ ಚೇರ್ಮನ್, ಮತ್ತು ಆಗಿನ ಮುಖ್ಯ ಎಂಜಿನಿಯರ್ ಶ್ರೀ ರಾಮಯ್ಯ ನವರನ್ನು ಭೇಟಿಯಾಗಿ ಇಲ್ಲಿನ ರೈತರ ಪರಿಸ್ಥಿತಿ ಗಂಭೀರ ಸ್ಥಿತಿ ತಳೆದಿದೆ ಎಂದು ಹತ್ತಾರು ಸಲ ಭೇಟಿ ಕೊಟ್ಟು ಹೇಳಿದ್ದೇನೆ. ಈ ವರ್ಷ ಇಲ್ಲಿನ ರೈತರು ಬೆಳೆದ ಬೆಸಿಗೆ ಬೆಳೆಯೆಲ್ಲಾ ಒಣಗಿಹೋಗುತ್ತವೆ. ಇವರಿಗೆಲ್ಲಾ ಪರಿಹಾರ ಕೊಡಬೇಕಾಗುತ್ತದೆ ಎಂದು ಹೇಳಿದರೂ ಅವರು ಈ ಕಡೆ ಗಮನ ಹರಿಸಿಲ್ಲ. ಇದರು ಟ್ರಾನ್ಸ್‌ಫಾರಂ ಕಲ್ಕತದಿಂದ ಬರಲಿಲ್ಲ, ಮೀಟರ್ಸ್ ಇಲ್ಲಾ ಎಂದು ಏನೇನೋ ನೆವಗಳನ್ನು ಹೇಳಿ ಕೊಂಡು ಬರುತ್ತಿದ್ದಾರೆ. If that firm is not going to supply, then under the provisions of the agreement let the Government sue that firm at and Culcutta and recover damages everything from them Let them take compensation from them and place orders with some other firm. ಇವರ ಕೈಯಿಂದ ಇದನ್ನು ಮಾಡಲಾಗದಿದ್ದರೆ ಬೇರೆ ಫರ್ಮಗೆ (Firm) ಈ ಕೆಲಸವನ್ನು ವಹಿಸಲಿ. ರೈತರ ಬಾವಿಗಳಲ್ಲಿ ನೀರು ಬೇಕಾದಷ್ಟು ಇದ್ದರೂ ವಿದ್ಯುಚ್ಛಕ್ತಿ ಇಲ್ಲದೆ ಬೇಸಿಗೆ ಬೆಳೆಯೆಲ್ಲಾ ನಾಶವಾಗಿದ್ದು, ಇದರಿಂದ ಬಳ್ಳೊಳ್ಳಿ ಮಾತದಾರ ಕ್ಷೇತ್ರದ ರೈತರಿಗೆ ಒಂದು ಕೋಟಿ ರೂಪಾಯಿ ವರೆಗೆ ನಷ್ಟವಾಗಿದೆ. ಇದಕ್ಕಿಂತಲೂ ಹೆಚ್ಚು ನಷ್ಟವಾಗಿದೆಯೆಂದರೇನೂ ಅತಿಶಯೋಕ್ತಿಯಾಗಲಾರದು. ಗ್ರೌನ್‌ನೆಟ್, (Groundnut) ಕಾಟನ್, (cotton) ಮೆಣಸಿನಕಾಯಿ (chilly) ಮುಂತಾದ ಬೇಸಿಗೆ ಬೆಳೆಗಳೆಲ್ಲಾ ಸಂಪೂರ್ಣವಾಗಿ ಒಣಗಿ ಹೋಗಿವೆ. ಇಲ್ಲಿನ ರೈತರು ಸಂಘಟಿತರಾಗಿ ಒಂದು ರೈತ ಸಂಘದ ನೇತೃತ್ವದಲ್ಲಿ ಸುಮಾರು ೧೦,೦೦೦ ಜನರು ಉಪವಾಸ ಸತ್ಯಾಗ್ರಹವನ್ನು ತಾ. ೧೦ನೇ ಜೂನ್ ೧೯೮೦ ರಿಂದ ಮಾಡುತ್ತಿದ್ದಾರೆ. ಬಿಜಾಪುರ ಡೆಪ್ಯುಟಿ ಕಮಿಷನರ್ ಕಛೇರಿ ಮುಂದೆ, ಕೆ.ಇ.ಬಿ. ಕಛೇರಿ ಮುಂದೆ, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಎಂಜಿನಿಯರ್, (ಕೆ.ಇ.ಬಿ.) ಕಛೇರಿ ಮುಂದು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಇದು ಬಹಳ ಗಂಭೀರವಾದ ಸಮಸ್ಯೆ, ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರಿಗೆ ತಿಳಿದು ಅವರು ಈ ಸಮಸ್ಯೆಯನ್ನು ಬಗೆಹರಿಸುತ್ತಾರೆ ಅಂತಾ ತಿಳಿದುಕೊಂಡು ಇವರ ಗಮನವನ್ನು ಈ ಕಡೆಗೆ ಸೆಳೆಯಲು ಅವರು ಈ ಉಪವಾಸ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ಕರ್ನಾಟಕ ವಿದ್ಯುಚ್ಛಕ್ತಿ ಬೋರ್ಡ್ ಅವರ ಉದಾಸೀನದಿಂದ ಏನು ಕೋಟ್ಯಾಂತರ ರೂಪಾಯಿ ಲುಕ್ಸಾನಂ ಆಗುತ್ತಾ ಇದೆ ಅದನ್ನು ಸರ್ಕಾರದ ಗಮನಕ್ಕೆ ತರಲು ಇವರುಗಳು ಸತ್ಯಾಗ್ರಹ ಮಾಡುತ್ತಿದ್ದಾರೆ.

ಮಹಾರಾಷ್ಟ್ರದಲ್ಲಿ ಭೀಮಾ ನದಿಯಂ ಎಡದಂಡೆಯಲ್ಲಿರತಕ್ಕ ರೈತರು ಒಂದು ಎಚ್.ಪಿ. ವಿದ್ಯುತ್ ಬಳಸಿದರೆ ಅವರು ಕೇವಲ ಒಂದು ನೂರು ರೂಪಾಯಿ ಒಂದು ವರ್ಷಕ್ಕೆ ಕೊಡುತ್ತಾರೆ. ಆದೇ ರೀತಿ ಭೀಮಾ ನದಿ ಬಲದಂಡೆಯಲ್ಲಿರುವ ನಮ್ಮ ರೈತರು ಮೊದಲು ೨೦೦ ಕಿ. ವಾ. ವರೆಗೆ ೨೦ ಪೈಸೆಯಂತೆ, ಆ ನಂತರ ೨೨ ಪೈಸೆಯಂತೆ ಕೊಡಬೇಕಾಗಿದೆ ಮಹಾರಾಷ್ಟ್ರದಲ್ಲಿ ರೈತರು ೩ ಎಚ್.ಪಿ. ಬಳಸಲಿ; ೫ ಎಚ್.ಪಿ. ಬಳಸಲಿ ಅವರು ಒಂದಂ ವರ್ಷಕ್ಕೆ ೩೦೦ ರೂಪಾಯಿ ಅಥವಾ ೫೦೦ ರೂಗಳನ್ನು ವಿದ್ಯುತ್ ಶುಲ್ಕ ಕಟ್ಟಿದರೆ. ನಮ್ಮ ರೈತರು ಬರೇ ೩ ಎಚ್.ಪಿ. ಪವರ್ ಬಳಕೆ ಮಾಡಿದರೂ ೫೦೦—೬೦೦ ರೂಪಾಯಿ ಗಳವರೆಗೆ ಕೊಡಬೇಕಾಗುತ್ತದೆ. ನಮ್ಮ ಲೈನ್ ಮ್ಯಾನ್‌ಗಳು ಇಂಡಿಯಲ್ಲೋ, ಬಿಜಾಪುರದಲ್ಲೋ ಕುಳಿತುಕೊಂಡು ಬಿಲ್ ಹಾಕುವುದರಿಂದ ರೈತರಿಗೆ ಬಹಳ ತೊಂದರೆಯಾಗಿದೆ. ಲೈನ್ ಮೆನ್ ನಿಂದ ಹಿಡಿದು, ಅಸಿಸ್ಟೆಂಟ್ ಎಂಜಿನಿಯರ್, ಜೂನಿಯರ್, ಎಂಜಿನಿಯರ್ ಎಕ್ಸಿಕ್ಯೂಟಿವ್ ಎಂಜಿನಿಯರ್, ಮುಖ್ಯ ಎಂಜಿನಿಯರ್‌ರವರ ವರೆಗೂ ಸರಿಯಾದ ಕೋ ಆರ್ಡಿನೇಷನ್ ಇಲ್ಲ. ಕೆ.ಇ.ಬಿ. ಬಿಜಾಪುರ ಡಿವಿಜನ್‌ನಲ್ಲಿ ಹೇಳುವವರು ಕೇಳುವವರ್ಯಾರೂ ಇಲ್ಲದಂತಾಗಿದೆ. ಇದೇ ಸಮಸ್ಯೆಯನ್ನು ಮೇಲಧಿಕಾರಿಗಳಿಗೆ ತಿಳಿಸಿದರೂ ಕೂಡ ಅವರು ಉದಾಸೀನರಾಗಿದ್ದಾರೆ. That Top Officer may be wise but if he don't know how to administer and how to control and co-ordinate the what is the use ? and naturally our Ryots will be in loss for non supply of Irregular supply of Electricity ಆದುದರಿಂದ ಇವತ್ತಿನ ದಿವಸ ಯಾವ ಅಧಿಕಾರಿಗಳಿಂದ ರೈತರಿಗೆ ಲುಕ್ಸಾನು ಆಗುತ್ತಾ ಇದೆ, ಅಂಥಹ ಅಧಿಕಾರಿಗಳಿಗೆ ಇವತ್ತು ಗಂಭೀರ ಎಚ್ಚರಿಕೆ ಯನ್ನು ಕೊಡಬೇಕೆಂದು ಹೇಳುತ್ತಿದ್ದೇನೆ. ರೈತರಿಗೆ ಲುಕ್ಸಾನು ಆದರೆ ಸಮಾಜಕ್ಕೆ ಮತ್ತು ರಾಷ್ಟ್ರಕ್ಕೆ ಲುಕ್ಸಾನು ಆಗುತ್ತದೆ. ಇವತ್ತು ರೈತರು ಎಂದರೆ ಸರ್ಕಾರಿ ಅಧಿಕಾರಿಗಳ ಬೆನ್ನಿನ ಹಿಂದೆ ತಿರುಗತಕ್ಕಂತಹ ನಾಯಿಗಳು ಎಂದು ತಿಳಿದುಕೊಂಡಿದ್ದಾರೆ ಎಂದು ನಾನು ಹೇಳುತ್ತಿದ್ದೇನೆ. Why the Government servants, that too in KEB are so indifferent to the problems of ryots? ಎನ್ನುವ ಮಾತನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಕೂಡಲೇ ಮುಖ್ಯ ಮಂತ್ರಿಗಳು ವಿಧ್ಯುಚ್ಛಕ್ತಿ ಕೊರತೆಯನ್ನು ನೀಗಿಸಲು ಎಲ್ಲ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ವಿನಂತಿಸುತ್ತೇನೆ.

ಎರಡನೆಯದಾಗಿ ಸುಮಾರು ಮೂರು ಹೆಚ್.ಪಿ. ಮೋಟಾರ್‌ನ್ನು ತೆಗೆದುಕೊಂಡು ಕಾರ್ಯಾರಂಭ ಮಾಡಿದರೆ ತಿಂಗಳಿಗೆ ಸುಮಾರು ನಾಲ್ಕು ನೂರು ರೂಪಾಯಿನಿಂದ ಹಿಡಿದು ಐದು ನೂರು ರೂಪಾಯಿಗಳ ವರೆಗೆ ಮಿನಿಮಮ್ ಚಾರ್ಜ್ ಬರುತ್ತದೆ. ಅಲ್ಲದೆ ಒಂದು ತಿಂಗಳಲ್ಲಿ ಐದು ನೂರುರಿಂದ ಆರುನೂರು ಮೋಟಾರುಗಳು ಸುಟ್ಟುಹೋಗಿ ಇದರಿಂದ ೬೦-೭೦ ಸಾವಿರ ರೂಪಾಯಿಗಳ ವರೆಗೂ ರೈತರಿಗೆ ಲುಕ್ಸಾನಾಗಿರುತ್ತದೆ. ಅಲ್ಲದೆ ಬೆಳೆಗಳು ನಾಶವಾಗಿ ರೈತರಿಗೆ ಹಾನಿಯಾಗಿರುತ್ತದೆ. ಆದ್ದರಿಂದ ರೈತರು ಬಹಳ ಕಳವಳ ಸ್ಥಿತಿಯಲ್ಲಿದ್ದಾರೆ.ಈರೀತಿ ಬೆಳೆಗಳಿಂದ ಲುಕ್ಸಾನಾಗಿ ರೈತರು ತೊಂದರೆಯನ್ನು ಅನುಭವಿಸು ತ್ತಿರುವ ಸಂದರ್ಭದಲ್ಲಿ ಅವರು ಸಾಲವನ್ನು ತೆಗೆದುಕೊಂಡಿರತಕ್ಕಂಥ ಪಿಎಲ್.ಡಿ. ಬ್ಯಾಂಕ್‌ನವರು, ಮತ್ತು ತಾಕಾವಿ ಸಾಲವನ್ನುಕೊಟ್ಟಿರತಕ್ಕಂಥ ಸಹಕಾರ ಮತ್ತು ಜಮೀನು ಅಭಿವೃದ್ಧಿಗಾಗಿಕೊಟ್ಟಂತಹ ಸಹಕಾರಿ ಸಂಘಗಳು ಸಾಲವನ್ನು, ಮರುಪಾವತಿ ಮಾಡಲು ಒತ್ತಾಯವನ್ನು ತರುತ್ತಿದ್ದಾರೆ. ರೆವಿನ್ಯೂ ಖಾತೆಯವರಾದ ತಹಸೀಲ್‌ದಾರರು ಕಾರಿನಲ್ಲಿ ರೈತರಬಳಿಗೆ ಹೋಗಿ ಕಂದಾಯದ ವಸೂಲಿಯಂಬಗ್ಗೆ ಒತ್ತಾಯ ತರುತ್ತಿದ್ದಾರೆ. ರೈತರು ಬೆಳೆಯನ್ನು ಬೆಳೆದಿರುತ್ತಾರೋ ಇಲ್ಲವೋ ನೋಡುತ್ತಲೇ ಇಲ್ಲ. ರೆವಿನ್ಯೂ ಅಧಿಕಾರಿಗಳಿಂದ ಒಂದು ಕಿರುಕುಳ (Harrassment) ಬಹಳ ಗಂಭೀರವಾದುದಾಗಿರುತ್ತದೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಕೂಡಲೇ ಇದರಬಗ್ಗೆ ಒಂದು ಪರಿಹಾರಷನ್ನು ಸೂಚಿಸ ಬೇಕೆಂದು ಹೇಳುತ್ತೇನೆ. ವಿದ್ಯುಚ್ಛಕ್ತಿಯ ಸರಬರಾಜನ್ನು ಮಾಡುವ ಬಗ್ಗೆ ಒಂದು ಆಶ್ವಾಸನೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಬಿಜಾಪುರದಲ್ಲಿ ತಾಲೂಕ್ ಕಚೇರಿಯ ಮುಂದೆ ಈ ಎಲ್ಲ ಬೇಡಿಕೆ ಯನ್ನು ಸರ್ಕಾರದ ಮುಂದಿಟ್ಟು ಏನು ಸತ್ಯಾಗ್ರಹ ಮಾಡುತ್ತಿರುತ್ತಾರೆ ಅದನ್ನು ಕೂಡಲೇ ಈ ಸತ್ಯಾಗ್ರಹ ಹಿಂದೆ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ನವರೂ, ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರೂ ರೈತರು ಬೆಳೆ ಬೆಳೆದಿರುತ್ತಾರೆಯೇ, ಬಾಕಿ ವಸೂಲ ಮಾಡಬೇಕೇ ಬೇಡವೇ ಎನ್ನುವುದನ್ನು ಯೋಚನೆ ಮಾಡುವುದೇ ಇಲ್ಲ. ಈ ಎಲ್ಲ ಸಮಸ್ಯೆಗಳನ್ನು ಪರಿಹರಿಸದಿದ್ದರೆ ರೈತರ ಕಲ್ಯಾಣವಾಗುವುದಿಲ್ಲ. ರೈತರಿಗೆ ಈಗ ಏನು ಲುಕ್ಸಾನು ಆಗಿರುತ್ತದೆ ಅದಕ್ಕೆ ಸರ್ಕಾರದವರು ಕಾಂಪನ್‌ಸೇಟ್ (Compensation) ಕೊಡುವಂಥ ಒಂದು ವ್ಯವಸ್ಥೆಯನ್ನು ಮಾಡ

ಬೇಕು. ಕೆ.ಇ.ಬಿ. ಅಧಿಕಾರಿಗಳು ವಿದ್ಯುಚ್ಛಕ್ತಿಯನ್ನು ಸರಿಯಾದ ರೀತಿಯಲ್ಲಿ ಸರಬರಾಜು ಮಾಡುವಂಥ ವ್ಯವಸ್ಥೆಯನ್ನು ಮಾಡಲು ಅವರಿಗೆ ಡೈರೆಕ್ಷನ್ ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

SRI R. GUNDU RAO.—Sir, I wish to make the following statement.

The President of the Agriculturists Development Association, Ballolli Constituency, Bijapur District had submitted a Memorandum to Government regarding low voltage conditions and irregular power supply to agricultural consumers in this area. The representatives of this Associations also met the Chairman, on 3rd June 1980. K. E. B.

2. One of the two 100 MVA power transformers in the Hubli Receiving Station failed on 24th May 1980 and the KEB had to resort to load shedding in certain areas of North Karnataka. This was one of the reasons for irregular supply in this area.

3. The Chairman, KEB has left for an on-the-spot inspection of this area for providing whatever immediate relief is possible,

4. The measures the Board is contemplating to improve the voltage profiles and the quality of service in the said area are as follows :

1. Construction of 110 KV single circuit line from Devarahipparagi to Indi by tapping the existing 110 KV Bagewadi-Shahabad line and establishing a 110/33-11 Sub-Station at Indi.

2. Extension of 33 KV line from Indi to Zalki and establishing a 33/11 Sub-Station at Zalki.

The line from Indi to Zalki would provide an immediate relief by way of extending 33 KV line from Indi to Zalki and the erection of 33 KV poles are under progress and the line is expected to be completed by the end of July 1980.

5. I have asked the KEB to step up the progress on both these lines and the associated sub-stations.

SRI R. GUNDU RAO.—Already, the Chairman of the K. E. B. has been directed to inspect the spot. He will examine the matter. Definitely the Government will ask him to give some relief immediately to the ryots.